# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:46:ಗ್ರಾವಿಯೋ:2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:08.07.2015

## ಸುತ್ತೋಲೆ

ವಿಷಯ : ಗ್ರಾಮ ವಿಕಾಸ ಯೋಜನೆಯನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ : 50 : ಸುಗ್ರಾಯೋ : 2014, ದಿನಾಂಕ 20.10.2014
2. ಸಂಖ್ಯೆ:.ಗ್ರಾಅಪ : 07 : ಸುಗ್ರಾಯೋ : 2015, ಬೆಂಗಳೂರು, ದಿನಾಂಕ : 07.03.2015
3. ಸಂಖ್ಯೆ:.ಗ್ರಾಅಪ : 07 : ಗ್ರಾವಿಯೋ : 2015, ಬೆಂಗಳೂರು, ದಿನಾಂಕ : 27.05.2015

* * *

ರಾಜ್ಯ ಸರ್ಕಾರವು ಗ್ರಾಮಗಳನ್ನು ಸಮಗ್ರ ಅಭಿವೃದ್ಧಿಗೊಳಿಸುವ ಸಂಕಲ್ಪದಿಂದ "ಗ್ರಾಮ ವಿಕಾಸ ಯೋಜನೆ"ಯನ್ನು ಉಲ್ಲೇಖ-1ರ ರೀತ್ಯ ಜಾರಿಗೆ ತಂದಿದ್ದು ಯೋಜನೆಯ ಮಾರ್ಗಸೂಚಿಯನ್ನು ಹೊರತಂದಿದೆ. ಯೋಜನೆಯಡಿ ಗ್ರಾಮಗಳ ಆಯ್ಕೆ ವಿಧಾನವನ್ನು ಉಲ್ಲೇಖ-2&3 ರಲ್ಲಿ ತಿಳಿಸಲಾಗಿತ್ತು. ಮಾರ್ಗಸೂಚಿಯನ್ನು ಆಧರಿಸಿ ಯೋಜನೆಗೆ ಗ್ರಾಮಗಳನ್ನು ಆಯ್ಕೆ ಮಾಡುವ ಮತ್ತು ಕಾರ್ಯಕ್ರಮಗಳಿಗೆ ಅನುದಾನ ನಿಗದಿಪಡಿಸುವ ಸಂದರ್ಭದಲ್ಲಿ ಕೆಳಕಂಡ ನಿಬಂಧನೆಗಳನ್ನು ಪಾಲಿಸುವುದು.

**ನಿಬಂಧನೆಗಳು :**

1. ಒಟ್ಟು 189 ಮತಕ್ಷೇತ್ರಗಳಿಂದ ಆಯಾ ವಿಧಾನಸಭಾ ಕ್ಷೇತ್ರದ ಶಾಸಕರು ತಮ್ಮ ವಿಧಾನಸಭಾ ಕ್ಷೇತ್ರದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಎಸ್‌ಸಿ & ಎಸ್‌ಟಿ ಹೆಚ್ಚು ಜನಸಂಖ್ಯೆ ಉಳ್ಳ 2 ಗ್ರಾಮಗಳು ಸೇರಿದಂತೆ ಗರಿಷ್ಠ 5 ಗ್ರಾಮಗಳನ್ನು ಮಾತ್ರ ಯೋಜನೆಯಡಿ ಆಯ್ಕೆ ಮಾಡಬೇಕು.
2. 5000 ಜನಸಂಖ್ಯೆಯೊಳಗೆ ಅಥವಾ ಜನಸಂಖ್ಯೆಯನ್ನು ಮೀರಿದ ಸಂದರ್ಭದಲ್ಲಿಯೂ ಸಹ ಗರಿಷ್ಠ 5 ಗ್ರಾಮಗಳು (ಹೆಚ್ಚು ಎಸ್‌ಸಿ, ಎಸ್‌ಟಿ ಜನಸಾಂದ್ರತೆ ಇರುವ ಕನಿಷ್ಠ 2 ಗ್ರಾಮಗಳೂ ಸೇರಿ) ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆ ಗ್ರಾಮಗಳನ್ನು ಆಯ್ಕೆ ಮಾಡಬಹುದು.
3. 2 ಪೂರ್ಣ ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ಗರಿಷ್ಠ 8000 ಜನಸಂಖ್ಯೆಯೊಳಗೆ ಅಥವಾ ಜನಸಂಖ್ಯೆಯನ್ನು ಮೀರಿದ ಸಂದರ್ಭದಲ್ಲಿಯೂ ಗರಿಷ್ಠ 8 ಗ್ರಾಮಗಳನ್ನು (ಹೆಚ್ಚು ಎಸ್‌ಸಿ, ಎಸ್‌ಟಿ ಜನಸಾಂದ್ರತೆ ಇರುವ ಕನಿಷ್ಠ 3 ಗ್ರಾಮಗಳೂ ಸೇರಿ) ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆ ಗ್ರಾಮಗಳನ್ನು ಆಯ್ಕೆ ಮಾಡಬಹುದು.
4. ಆಯ್ಕೆ ಮಾಡುವ ಗ್ರಾಮವು ಈ ಹಿಂದೆ ಯಾವುದೇ ಯೋಜನೆಯಡಿಯಲ್ಲಿ ಆಯ್ಕೆಯಾಗಿರಬಾರದು. ಉದಾ: - ಸ್ವಚ್ಛ ಗ್ರಾಮ, ಸುಗ್ರಾಮ-ಸುಗ್ರಾಮ, ಸುವರ್ಣ ಗ್ರಾಮೋದಯ ಇತ್ಯಾದಿ.,
5. ಎಸ್‌ಸಿ, ಎಸ್‌ಟಿ ಹೆಚ್ಚು ಜನಸಾಂದ್ರತೆ ಉಳ್ಳ ಗ್ರಾಮಗಳನ್ನು ಆಯ್ಕೆ ಮಾಡುವಾಗ ಆಯಾ ತಾಲ್ಲೂಕಿನಲ್ಲಿ ಈ ಹಿಂದೆ ಯಾವುದಾದರೂ ಯೋಜನೆಗೆ ಆಯ್ಕೆಯಾಗಿರುವ ಗ್ರಾಮಗಳನ್ನು ಹೊರತುಪಡಿಸಿ ಆ ತಾಲ್ಲೂಕಿನಲ್ಲಿ ಇನ್ನುಳಿದ ಯಾವುದೇ ಯೋಜನೆಗೆ ಆಯ್ಕೆಯಾಗದ ಹೆಚ್ಚು ಎಸ್‌ಸಿ, ಎಸ್‌ಟಿ ಜನಸಂಖ್ಯೆ ಇರುವ ಗ್ರಾಮಗಳನ್ನು ಆಯ್ಕೆ ಮಾಡಬೇಕು.
6. ನಿಗದಿಪಡಿಸಿದ ಗರಿಷ್ಠ ಗ್ರಾಮಗಳ ಸಂಖ್ಯೆಯನ್ನು ಕಡಿಮೆಗೊಳಿಸಿ ಆಯ್ಕೆ ಮಾಡಿದಾಗಲೂ ಸಹ ಹೆಚ್ಚು ಎಸ್‌ಸಿ, ಎಸ್‌ಟಿ ಜನಸಾಂದ್ರತೆಯುಳ್ಳ ಗ್ರಾಮಗಳನ್ನೇ ಕಡ್ಡಾಯವಾಗಿ ಆಯ್ಕೆ ಮಾಡಬೇಕು.

...2

7. ೨೦೦೦ ಜನಸಂಖ್ಯೆಯನ್ನು ಮೀರಿ ಗರಿಷ್ಠ 5 ಗ್ರಾಮಗಳನ್ನು ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ಅನುದಾನವು ರೂ.3.75 ಕೋಟಿಗಳನ್ನು ಮಾತ್ರ ಹಂಚಿಕೆ ಮಾಡಿ ಸೀಮಿತಗೊಳಿಸಲಾಗುವುದು.

8. ಎರಡು ಪೂರ್ಣ ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಗರಿಷ್ಠ ೮೦೦೦ ಜನಸಂಖ್ಯೆಯನ್ನು ಮೀರಿ ಗರಿಷ್ಠ 8 ಗ್ರಾಮಗಳು ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆಯ ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ರೂ.6.00 ಕೋಟಿಗಳನ್ನು ಮಾತ್ರ ಹಂಚಿಕೆ ಮಾಡಿ ಸೀಮಿತಿಗೊಳಿಸಲಾಗುವುದು.

9. ಯೋಜನೆಯಡಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು ಮತ್ತು ನಿಗದಿಪಡಿಸಲಾದ ಶೇಕಡಾವಾರು ಅನುದಾನದ ಮೊತ್ತವನ್ನು ಅನುಬಂಧ-1 ರಲ್ಲಿ ನೀಡಲಾಗಿದ್ದು, ಅದರಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು.

10. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದ್ದು, ಯೋಜನೆಯಡಿ ಸದರಿ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು.

11. ಗ್ರಾಮ ವಿಕಾಸ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಅನುಬಂಧ-3 ರಲ್ಲಿ ಲಗತ್ತಿಸಿರುವ ವೇಳಾಪಟ್ಟಿಯಂತೆ ಯೋಜನೆಯ ಕಾರ್ಯಚಟುವಟಿಕೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.

(ಬೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ, ರಸ್ತೆ & ಸೇತುವೆ) ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಗಳು:**

1. ರಾಜ್ಯದ ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.& ಪಂ.ರಾಜ್ ಇಲಾಖೆ.
4. ಮುಖ್ಯ ಅಭಿಯಂತರರು, ಪಿಆರ್ಇಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
6. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.
7. ರಕ್ಷ ಕಡತಕ್ಕೆ / ಹೆಚ್ಚುವರಿ ಪ್ರತಿ.

# ಅನುಬಂಧ-1

| ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು | ನಿಗಧಿಪಡಿಸಲಾದ ಶೇಕಡಾವಾರು ಮೊತ್ತ |
|---|---|
| • ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ). | 50% |
| • ಗ್ರಂಥಾಲಯ / ಸಾಹಿತಿ ಕಲಾವಿಧರ ಸ್ಮಾರಕ / ಸಭಾಭವನ / ಬಯಲು ರಂಗಮಂದಿರ ನಿರ್ಮಾಣ. | 12% |
| • ಯುವಕ / ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್ / ಗರಡಿಮನೆ / ಫ್ಲಡ್‌ಲೈಟ್ ಆಟದ ಮೈದಾನ / ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ | 12% |
| • ಸೌರ ಬೆಳಕು ದೀಪಗಳ ಅಳವಡಿಕೆ / LED ದೀಪಗಳು | 3% |
| • ತಿಪ್ಪೆ / ತಿಪ್ಪೆಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳ ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ) | 10% |
| • ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ ನೇರಪ್ರಸಾರ. ಹಾಗೂ ಮೂಲ ಸೌಕರ್ಯಕ್ಕೆ | 2% |
| • ಗುಡಿ (ಗ್ರಾಮ ದೇವತೆ)/ಮಸೀದಿ/ಚರ್ಚ್‌ಗಳ, ಪುನರುಜ್ಜೀವನ/ ಜೀರ್ಣೋದ್ಧಾರ/ ಕಟ್ಟಡ ನಿರ್ಮಾಣಕ್ಕಾಗಿ | 6% |
| • ಫ್ಲೆಕ್ಸಿ ಫಂಡ್ | 5% |

# ಅನುಬಂಧ-2

## ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿರುವ ಪಟ್ಟಿ.

| ಕ್ರ. ಸಂ. | ಕಾರ್ಯಕ್ರಮಗಳು | ಅನುಷ್ಠಾನಕ್ಕೆ ತೆಗೆದುಕೊಳ್ಳಲು ನಿಗಧಿಗೊಳಿಸಿದ ಪ್ರಮಾಣ |
|---|---|---|
| 1 | ರೈತರ ಭೂ-ಅಭಿವೃದ್ಧಿ | ಕನಿಷ್ಟ 20 ರೈತರ ಭೂ ಅಭಿವೃದ್ಧಿ. |
| 2 | ನಮ್ಮ ಹೊಲ-ನಮ್ಮ ದಾರಿ | ಆಯ್ಕೆಯಾದ ಗ್ರಾಮಗಳಲ್ಲಿ ಕನಿಷ್ಠ 20 ಕಿ.ಮೀ. ಹೊಲಕ್ಕೆ ಹೋಗುವ ಮಣ್ಣಿನ ರಸ್ತೆ ನಿರ್ಮಾಣ |
| 3 | ರೈತರ ಕಣ | ಕನಿಷ್ಟ 2 |
| 4 | ಕುರಿ / ದನದ ದೊಡ್ಡಿ | ಕನಿಷ್ಟ 50 ದನದ ಹಾಗೂ ಕುರಿ ದೊಡ್ಡಿ ಅಗತ್ಯತೆ ಆಧರಿಸಿ |
| 5 | ನಮ್ಮೂರ ಕೆರೆ | ಕನಿಷ್ಟ 2 ಕೆರೆಗಳ ಪುನಶ್ಚೇತನ |
| 6 | ಮನೆಗೊಂದು ಶೌಚಾಲಯ | 100%<br>(ಗ್ರಾಮದ ಎಲ್ಲಾ ಮನೆಗಳಿಗೂ ಶೌಚಾಲಯ ಕಡ್ಡಾಯ) |
| 7 | ಆಟದ ಮೈದಾನ | ಕನಿಷ್ಠ 2 ಆಟದ ಮೈದಾನ ನಿರ್ಮಾಣ ಮಾಡಬೇಕು. ಅದರಲ್ಲಿ 1 ಆಟದ ಮೈದಾನವನ್ನು ನಿಗಧಿಯಾದ ಶೇ.12 ರ ಅನುದಾನವನ್ನು ಬಳಸಿಕೊಂಡು ಕಡ್ಡಾಯವಾಗಿ ಫ್ಲಡ್ ಲೈಟ್ ಅಳವಡಿಸಬೇಕು |
| 8 | ಸ್ಮಶಾನಾಭಿವೃದ್ಧಿ | ಕನಿಷ್ಟ 1 ಸ್ಮಶಾನಾಭಿವೃದ್ಧಿಪಡಿಸುವುದು. |
| 9 | ನಮ್ಮ ಹಳ್ಳಿ-ನಮ್ಮ ನೀರು | ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ತೆಗೆದುಕೊಳ್ಳುವುದು |
| 10 | ರಾಜೀವ್ ಗಾಂಧಿ ಸೇವಾ ಕೇಂದ್ರ | ಅವಶ್ಯಕತೆಗನುಸಾರ ಆಯ್ಕೆಯಾದ ಗ್ರಾಮದ ಗ್ರಾಮ ಪಂಚಾಯತ್ ಕೇಂದ್ರ ಸ್ಥಾನದಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ |
| 11 | ಕೃಷಿಕ ಮಹಿಳಾ ಸಶಕ್ತೀಕರಣ | 2 ರಿಂದ 5 ಗುಂಪುಗಳಿಗೆ ಪ್ರೋತ್ಸಾಹ |
| 12 | ರಾಜೀವ್ ಗಾಂಧಿ ಚೈತನ್ಯ ಯೋಜನೆ | 50 ಜನರಿಗೆ ಸ್ವ-ಉದ್ಯೋಗ 50 ಜನರಿಗೆ ಉದ್ಯೋಗಾವಕಾಶ |
| 13 | ಕೌಶಲ್ಯಾಭಿವೃದ್ಧಿ | 50 ಜನರಿಗೆ ತರಬೇತಿ |
| 14 | ಶುದ್ಧ ಕುಡಿಯುವ ನೀರಿನ ಘಟಕ | ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಠ ಒಂದು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಹಾಗೂ ಕನಿಷ್ಠ 85 LPCD ನೀರು ಒದಗಿಸುವುದು |
| 15 | ಸಂಜೀವಿನಿ-ಜೀವನೋಪಾಯ ಅಭಿಯಾನ | 100 ಮಹಿಳೆಯರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಹಾಯಧನ |

...2

| | | |
|---|---|---|
| 16 | ಕೊಳವೆ ಬಾವಿ ಮರು ಪೂರಣ ಕಾರ್ಯಕ್ರಮ | ಸ್ಥಳೀಯ ಕೊಳವೆ ಬಾವಿ / ತೆರೆದ ಬಾವಿ ಮರು ಪೂರಣ |
| 17 | ಫುಟ್‌ಬ್ರಿಡ್ಜ್‌ಗಳ ನಿರ್ಮಾಣ | ಅವಶ್ಯಕತೆಗನುಸಾರ 2 ರಿಂದ 5 ಫುಟ್ ಬ್ರಿಡ್ಜ್‌ಗಳ ನಿರ್ಮಾಣ |
| 18 | ಗ್ರಾಮೀಣ ಗೋದಾಮುಗಳ ನಿರ್ಮಾಣ | ಕನಿಷ್ಟ ಒಂದು ಗ್ರಾಮೀಣ ಗೋದಾಮು ನಿರ್ಮಿಸುವುದು |
| 19 | ಉದ್ಯಾನವನ ನಿರ್ಮಾಣ / ಸಸಿ ನೆಡುವಿಕೆ | ಅಗತ್ಯತೆ ಆಧರಿಸಿ ಉದ್ಯಾನವನ ನಿರ್ಮಾಣ ಹಾಗೂ ಕನಿಷ್ಟ 1000 ಸಸಿಗಳನ್ನು ಗ್ರಾಮದ ವ್ಯಾಪ್ತಿಯಲ್ಲಿ ನೆಡುವುದು |
| 20 | ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ | ಅವಶ್ಯಕತೆಗನುಸಾರ ಒಂದು ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ |
| 21 | ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ | ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿರುವ ಸ್ಥಳೀಯ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ನಿಗದಿಯಾದ ಶೇ.12ರ ಅನುದಾನವನ್ನು ಬಳಸಿಕೊಂಡು ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಟ ಒಂದು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ |

# ಅನುಬಂಧ-3

## ಗ್ರಾಮ ವಿಕಾಸ ಯೋಜನೆಯ ಅನುಷ್ಠಾನ ವೇಳಾಪಟ್ಟಿ

| ಕ್ರ ಸಂ. | ಚಟುವಟಿಕೆಗಳು | ನಿಗಧಿಪಡಿಸಿದ ಅವಧಿ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿಗಳು |
|---|---|---|---|
| 1 | ಗ್ರಾಮಗಳ ಆಯ್ಕೆ – ಸಂಬಂಧಪಟ್ಟ ಶಾಸಕರ ಶಿಫಾರಸ್ಸಿನೊಂದಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸುವುದು ಮತ್ತು ಸರ್ಕಾರಕ್ಕೆ ಸಲ್ಲಿಸುವುದು. | 15.07.2015 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 2 | ಜಿಲ್ಲೆಗಳಿಂದ ಬಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಸರ್ಕಾರದ ಅನುಮೋದನೆ ನೀಡುವುದು. | 20.07.2015 | ಸರ್ಕಾರದ ಮಟ್ಟದಲ್ಲಿ. |
| 3 | ಆಯ್ಕೆಯಾದ ಗ್ರಾಮಗಳಲ್ಲಿ ವಾರ್ಡ್ / ಗ್ರಾಮ ಸಭೆ ಜರುಗಿಸಿ ಅಭಿವೃದ್ಧಿ ಯೋಜನೆಯನ್ನು ಸಾರ್ವಜನಿಕರ ಸಹಭಾಗಿತ್ವ ಮತ್ತು ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ತಯಾರಿಸುವುದು. ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆಯುವುದು. | 14.08.2015 | ಗ್ರಾಮ ಪಂಚಾಯತ್. |
| 4 | ಸಿವಿಲ್ ಕಾಮಗಾರಿಗಳ ವಿನ್ಯಾಸ, ಅಂದಾಜು ಪಟ್ಟಿ ತಯಾರಿಸುವುದು. | 31.08.2015 | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 5 | ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ನೀಡುವುದು. | 05.09.2015 | ಸಕ್ಷಮ ತಾಂತ್ರಿಕ ಅಧಿಕಾರಿಗಳು. |
| 6 | ಅಭಿವೃದ್ಧಿ ಯೋಜನೆಗೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು. | 05.09.2015 | ಗ್ರಾಮ ಪಂಚಾಯತ್ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ |
| 7 | ಟೆಂಡರ್ ಪ್ರಕ್ರಿಯೆಗಳು | 27.09.2015 | ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 8 | ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಆರಂಭ ಮಾಡುವುದು. ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು. | 02.10.2015 | ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 9 | ಮಾಹೆವಾರು ನಿಗಧಿತ ನಮೂನೆಯಲ್ಲಿ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. | ಪ್ರತಿ ಮಾಹೆ | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 10 | ಹಣ ಬಿಡುಗಡೆ | ತ್ರೈಮಾಸಿಕ | ಸರ್ಕಾರವು ಪ್ರಗತಿಯನ್ನಾಧರಿಸಿ ಜಿಲ್ಲಾ ಪಂಚಾಯತ್‌ಗಳ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ಚೆಕ್/EFMs ಮೂಲಕ ಹಣ ಬಿಡುಗಡೆ. |
| 11 | ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿ | ಪ್ರಗತಿಯನ್ನಾಧರಿಸಿ | ಗ್ರಾಮ ಪಂಚಾಯತ್‌ಗಳು ಪ್ರಗತಿಯನ್ನಾಧರಿಸಿ ಅನುಷ್ಠಾನ ಸಂಸ್ಥೆಗಳಿಗೆ ಚೆಕ್ ಮೂಲಕ ಹಣ ಪಾವತಿಸಬೇಕು. |
| 12 | ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು ಮುಕ್ತಾಯಗೊಳಿಸುವುದು. | 02.10.2016 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |